## 1. ಮಾಡ್ಯೂಲ್ ಮತ್ತು ಇದರ ರಚನೆಯ ವಿವರಗಳು

| ಮಾಡ್ಯೂಲ್ ವಿವರ | |
|---|---|
| ವಿಷಯ | ಅರ್ಥಶಾಸ್ತ್ರ |
| ಕೋರ್ಸ್ | ಅರ್ಥಶಾಸ್ತ್ರ **01 (11** ನೇ ತರಗತಿ, ಸೆಮಿಸ್ಟರ್ **- 1)** |
| ಮಾಡ್ಯೂಲ್ ಶೀರ್ಷಿಕೆ/ಶೀರ್ಷಿಕೆ | ಬಡತನ - ಭಾಗ **1** |
| ಮಾಡ್ಯೂಲ್ ಐಡಿ | **keec**_10401 |
| ಪೂರ್ವಾಪೇಕ್ಷಿತ ಅಂಶಗಳು | ಬಡತನ, ಪೌಷ್ಟಿಕತೆ, ಆದಾಯ, ಉದ್ಯೋಗ ಮುಂತಾದ ಕೆಲವು ಪದಗಳ ಬಗ್ಗೆ ಜ್ಞಾನ. |
| ಉದ್ದೇಶಗಳು | ಈ ಪಾಠವನ್ನು ಕಲಿತ ನಂತರ, ಕಲಿಯುವವರುಈ ಕೆಳಗಿನವುಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ:<br>• ಬಡತನದ ಪರಿಕಲ್ಪನೆ<br>• ಭಾರತದಲ್ಲಿ ಬಡತನದ ಅಂದಾಜುಗಳು<br>• ಬಡತನದ ಕಾರಣಗಳು<br>• ಬಡತನ ನಿವಾರಣಾ ಕಾರ್ಯಕ್ರಮಗಳು ಮತ್ತು ನೀತಿಗಳು |
| ಪ್ರಮುಖ ಪದಗಳು | ಬಡತನ, ಬಡತನ ರೇಖೆ, ಪೌಷ್ಟಿಕಾಂಶಮಟ್ಟ, URP, MRP |

## 2. Development Team

| Role | Name | Affiliation |
|---|---|---|
| National MOOC Coordinator (NMC) | Prof. Amarendra P. Behera | CIET, NCERT, New Delhi |
| Program Coordinator | Dr. Mohd. Mamur Ali | CIET, NCERT, New Delhi |
| Course Coordinator (CC) / PI | Prof. Neeraja Rashmi | DESS, NCERT, New Delhi |
| Subject Matter Expert (SME) | Mr. Naveen Sadhu | Guru Nanak Public School, |
| Review Team | Dr. Meera Malhan<br>Dr. Himanshu Singh | DCAC, University of Delhi<br>Satyawati College (Eve.), University of Delhi |
| Translator | Anita Ravindra G R | PGT in Economics, DMS, RIE, Mysore |

**ವಿಷಯಗಳ ಕೋಷ್ಟಕ:**

1. ಪರಿಚಯ
2. ಭಾರತದ ಬಡತನದ ಅಳತೆ
3. ಬಡತನದ ಕಾರಣಗಳು
4. ಬಡತನ ನಿರ್ಮೂಲನೆಯ ನೀತಿಗಳು ಮತ್ತು ಕಾರ್ಯಕ್ರಮಗಳು
5. ಸಾರಾಂಶ

## 1. ಪರಿಚಯ

ಬಡತನ ಕೇವಲ ಭಾರತಕ್ಕೆ ಮಾತ್ರವಲ್ಲ ಇಡೀ ವಿಶ್ವಕ್ಕೆ ದೊಡ್ಡ ಸವಾಲಾಗಿದೆ. ಇದು ಬಹು ಅಭಾವ ಮತ್ತು ಸಬಲೀಕರಣದ ಕೊರತೆಗಳ ಒಂದು ಪರಿಣಾಮವಾಗಿದೆ. ಬಡತನವನ್ನು ಒಂದು ವರ್ಗದ ಜನರು ಕನಿಷ್ಠ ಜೀವನಮಟ್ಟದಿಂದ ವಂಚಿತರಾಗಿರುವ ಸಾಮಾಜಿಕ ವಿದ್ಯಮಾನವೆಂದು ಪರಿಗಣಿಸಬಹುದು. ಅಂದರೆ ಕನಿಷ್ಠ ಜೀವನ ಮಟ್ಟವನ್ನು ಪೂರೈಸಲು ಅಸಮರ್ಥನಾದ ವ್ಯಕ್ತಿಯನ್ನು ಬಡವನೆಂದು  ಕರೆಯಬಹುದು. ಕನಿಷ್ಠ ಮಟ್ಟವು ಸಮಾಜದಿಂದ ಸಮಾಜಕ್ಕೆ, ರಾಷ್ಟ್ರದಿಂದ ರಾಷ್ಟ್ರಕ್ಕೆ ಬದಲಾಗುತ್ತದೆ ಮತ್ತು ಕಾಲಾಂತರದಲ್ಲಿ ಬದಲಾಗುತ್ತದೆ. ಸಾಮಾನ್ಯವಾಗಿ ಕನಿಷ್ಠ ಮಟ್ಟದ ಜೀವನ ಮಟ್ಟವು ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಇತರ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.

ಕನಿಷ್ಠ ಮಟ್ಟದ ಜೀವನ ಮಟ್ಟನಿರಾಕರಣೆಯು ಸಮಾಜಕ್ಕೆ ವೈಯಕ್ತಿಕ, ಸಾಮಾಜಿಕ ಮತ್ತು ಆರ್ಥಿಕ ನಷ್ಟಉಂಟುಮಾಡುತ್ತದೆ. ಆರೋಗ್ಯ ಮತ್ತು ದಕ್ಷತೆಯ ಕೊರತೆ ಇರುವುದರಿಂದ ಕಡಿಮೆ ಆದಾಯ ಬರುತ್ತದೆ. ಬಡತನವು ತನ್ನಿಂದ ತಾನೇ ಗುಣಿತವಾಗುತ್ತದೆ ಮತ್ತು ವಿಷವರ್ತುಲವಾಗುತ್ತದೆ ಎಂದು ಸಹ ಹೇಳಲಾಗುತ್ತದೆ.

## 2. ಭಾರತದಲ್ಲಿ ಬಡತನದ ಅಳತೆ

ನೀತಿ ಅಯೋಗ್ (NITI Ayog - ಹಿಂದಿನ ಯೋಜನಾ ಆಯೋಗ) ಭಾರತದಲ್ಲಿ ಬಡತನ ವನ್ನು ಅಂದಾಜು ಮಾಡಲು ಕೇಂದ್ರೀಯ ಸಂಸ್ಥೆಯಾಗಿದೆ (Nodal agency). ಇದು, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬಡತನವು ರಾಷ್ಟ್ರೀಯ ಮತ್ತು ರಾಜ್ಯ ಮಟ್ಟಗಳಲ್ಲಿ ಕಂಡುಬರುವುದು ಎಂದು ಅಂದಾಜು ಮಾಡಿದೆ. ಬಡತನ ದರದಿಂದ ಬಡತನದ ಪ್ರಮಾಣವನ್ನು ಅಳೆಯಲಾಗುತ್ತದೆ; ಇದು ಒಟ್ಟು ಜನಸಂಖ್ಯೆಯ ಶೇಕಡಾವಾರು ಎಂದು ವ್ಯಕ್ತಪಡಿಸಲಾದ ಒಟ್ಟು ಜನಸಂಖ್ಯೆಗೆ ಅನುಪಾತವಾಗಿದೆ. ಇದನ್ನು ತಲೆ ಎಣಿಕೆ ಅನುಪಾತ (ಹೆಡ್ ಕೌಂಟ್ - (HCR) ಎಂದೂ ಕರೆಯಲಾಗುತ್ತದೆ. ಒಂದು ತಿಂಗಳ ಅವಧಿಯಲ್ಲಿ ತಲಾ ಬಳಕೆ ವೆಚ್ಚಗಳ ಆಧಾರದ ಮೇಲೆ ಬಡತನದ ಅನುಪಾತವನ್ನು ಬಡತನ ರೇಖೆಯ ಮೂಲಕ ಅಳೆಯಲಾಗುತ್ತದೆ. ವೆಚ್ಚದ ದತ್ತಾಂಶವನ್ನು ಎನ್ ಎಸ್ ಎಸ್ ಒ(NSSO) ಸಮೀಕ್ಷೆಗಳಿಂದ ಪಡೆಯಲಾಗುತ್ತದೆ.

ಹಿಂದಿನ ಯೋಜನಾ ಆಯೋಗವು ಬಡತನ ನಿರ್ಮೂಲನೆಯ ವಿಧಾನವನ್ನು ಪರಿಶೀಲಿಸಲು ಕಾಲಕಾಲಕ್ಕೆ ವಿವಿಧ ಕಾರ್ಯಪಡೆ/ ತಜ್ಞರ ತಂಡಗಳನ್ನು ರಚಿಸಿತ್ತು. 1962 ರಲ್ಲಿ, ಜನಸಂಖ್ಯೆಗೆ

ಅಪೇಕ್ಷಿಸಿತ ಕನಿಷ್ಠ ಮಟ್ಟದ ಜೀವನ ಮಟ್ಟವನ್ನು ಕಂಡುಹಿಡಿಯಲು ಒಂದು ಕಾರ್ಯ ಗುಂಪನ್ನು ಸ್ಥಾಪಿಸಲಾಯಿತು. ಈ ಕಾರ್ಯ ಗುಂಪು, ಐದು ಸದಸ್ಯರನ್ನು ಹೊಂದಿರುವ ಮನೆಯು, ರಾಷ್ಟ್ರೀಯ ಕನಿಷ್ಠ ಬಳಕೆ ವೆಚ್ಚ (ಎನ್ ಎಂಸಿಇ- NMCE) 1960-61 ರ ಬೆಲೆಗಳಿಗೆ ಅನುಗುಣವಾಗಿ ತಿಂಗಳಿಗೆ 100 ರೂ. ಗಿಂತ ಕಡಿಮೆ ಇರಬಾರದು ಮತ್ತು 1960-61 ರ ಬೆಲೆಗಳಿಗೆ ಅನುಗುಣವಾಗಿ ಪ್ರತಿ ತಿಂಗಳಿಗೆ 20 ರೂ. ಇರಬೇಕು ಎಂದು ಶಿಫಾರಸು ಮಾಡಿತು. ಸರ್ಕಾರವು, ಶಿಕ್ಷಣ ಮತ್ತು ಆರೋಗ್ಯದ ಖರ್ಚನ್ನು ವಹಿಸಿಕೊಳ್ಳುತ್ತದೆ ಎಂದು ಬರವಸೆ ನೀಡಿದ್ದರಿಂದ, ಆ ಖರ್ಚನ್ನು ಬಡತನ ರೇಖೆಯಿಂದ ಹೊರತುಪಡಿಸುತ್ತಿದೆ ಎಂಬುದನ್ನು ಗಮನಿಸಬಹುದು.

1977 ರಲ್ಲಿ ಯೋಜನಾ ಆಯೋಗವು ಡಾ. ಲಕ್ಡವಾಲಾ (ಲಕ್ಡವಾಲಾ ಸಮಿತಿ) ನೇತೃತ್ವದಲ್ಲಿ ಕಾರ್ಯಪಡೆಯನ್ನು ರಚಿಸಿತು, ಇದು ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸರಾಸರಿ ಕ್ಯಾಲೋರಿಯ ಅಗತ್ಯವನ್ನು ಅಂದಾಜು ಮಾಡುವ ಮೂಲಕ ಬಡತನದ ಪರಿಮಾಣಾತ್ಮಕ ಮಾಪನವನ್ನು ಒದಗಿಸಿತು. ಗ್ರಾಮೀಣ ಪ್ರದೇಶಗಳಲ್ಲಿ ಉಷ್ಣಪರಿಮಾಣ (ಕ್ಯಾಲೋರಿಗಳ) ಸೇವನೆ, ದಿನಕ್ಕೆ 2400 ಕೆ.ಸಿ.ಎ.ಎಲ್ (kcal) ಮತ್ತು ನಗರ ಪ್ರದೇಶಗಳಲ್ಲಿ 2100 ಕೆ.ಸಿ.ಎ.ಎಲ್. (kcal) ಎಂದು ಅಂದಾಜಿಸಲಾಗಿದೆ. ವೆಚ್ಚಗಳ ದೃಷ್ಟಿಯಿಂದ, ಗ್ರಾಮೀಣ ಪ್ರದೇಶಗಳಲ್ಲಿ ತಿಂಗಳಿಗೆ ತಲಾ ರೂ.49 .09 ಗೆ, ತಲಾ 2400 ಉಷ್ಣಪರಿಮಾಣ ಸೇವನೆಯೊಂದಿಗೆ ಸಂಬಂಧಿಸಿದೆ ಮತ್ತು ನಗರ ಪ್ರದೇಶಗಳಲ್ಲಿ, ತಿಂಗಳಿಗೆ ತಲಾ ರೂ. 56-.64 ಗೆ, ತಲಾ 2100 ಉಷ್ಣಪರಿಮಾಣ ಸೇವನೆಯೊಂದಿಗೆ ಸಂಬಂಧಿಸಿದೆ. ಮಾಸಿಕ ತಲಾ ವೆಚ್ಚವು (Monthly Per Capita Expenditure – MPCA) ಬಡತನ ರೇಖೆ ಎಂದು ಕರೆಯಲಾಗಿತ್ತು.

**ಕೋಷ್ಟಕ 1.1**

**ಬಡತನ ಅನುಪಾತ ಮತ್ತು ಬಡವರ ಸಂಖ್ಯೆ: ತಜ್ಞರ (ಲಕ್ಡವಾಲಾ) ವಿಧಾನ**

| ವರ್ಷ | ಬಡತನ ಅನುಪಾತ (%) | | | ಬಡವರ ಸಂಖ್ಯೆ ದಶಲಕ್ಷ | | |
|---|---|---|---|---|---|---|
| | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ | ಒಟ್ಟು |
| **1973-74** | 56.4 | 49.0 | 54.9 | 261.3 | 60.0 | 321.3 |
| **1977-78** | 53.1 | 45.2 | 51.3 | 264.3 | 64. 6 | 328.9 |
| **1983** | 45.7 | 40.8 | 44.5 | 252.0 | 70.9 | 322.9 |
| **1987-88** | 39.1 | 38.2 | 38.9 | 231.9 | 75.2 | 307.1 |
| **1993-94** | 37.3 | 32.4 | 36.0 | 244.0 | 76.3 | 320.3 |
| **2004-05 (URP)** | 28.3 | 25.7 | 27.5 | 220.9 | 80.8 | 301.7 |

ಕೋಷ್ಟಕ 1.1, 1973-74 ರಿಂದ 2004-05 ರವರೆಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ

ಶೇಕಡಾವಾರು ಬಡವರ ಅನುಪಾತ ಮತ್ತು ಬಡ ಜನರ ಸಂಪೂರ್ಣ ಸಂಖ್ಯೆಯನ್ನು ತೋರಿಸುತ್ತದೆ. ನಿರಪೇಕ್ಷ ಸಂಖ್ಯೆ ಮತ್ತು ಶೇಕಡಾವಾರು ಎರಡರಲ್ಲೂ ಇಳಿಮುಖವಾಗಿದೆ. ಯು ಆರ್ ಪಿ (URP) ಅಥವಾ ಏಕರೂಪ ಉಲ್ಲೇಖ/ ಮರುಪಡೆಯುವಿಕೆ ಅವಧಿಯ ಬಳಕೆಯನ್ನು ಇಲ್ಲಿ ಉಲ್ಲೇಖಿಸಬಹುದು. ಇದರಲ್ಲಿ ಎಲ್ಲ ವಸ್ತುಗಳ ಗ್ರಾಹಕ ವೆಚ್ಚದ ದತ್ತಾಂಶವನ್ನು ೩೦ ದಿನಗಳ ಮರುಸ್ಥಾಪನೆ ಅವಧಿಯಿಂದ ಸಂಗ್ರಹಿಸಲಾಗಿದೆ.

ತಜ್ಞರ ಗುಂಪು ಸೂಚಿಸಿದ ಕೆಲವು ಅಸಮರ್ಕತೆಗಳ ದೃಷ್ಟಿಯಿಂದ, 2005 ರಲ್ಲಿ ಡಾ. ಸುರೇಶ್ ತೆಂಡೂಲ್ಕರ್ ಅಧ್ಯಕ್ಷತೆಯಲ್ಲಿ, ತಜ್ಞರ ಸಮಿತಿ ರಚಿಸಿ, ಹೊಸ ಬಡತನ ರೇಖೆಯನ್ನು ಪರಿಶೀಲಿಸಿ ಶಿಫಾರಸು ಮಾಡಲು ರಚಿಸಲಾಗಿತ್ತು. ಆದರೆ, ತಜ್ಞರ ಸಮಿತಿ ಹೊಸ ಬಡತನ ರೇಖೆಯನ್ನು ನಿರ್ಮಿಸಲಿಲ್ಲ. ಅದು ಲಕ್ಡವಾಲಾ ವಿಧಾನವನ್ನು ಅಳವಡಿಸಿಕೊಂಡಿತು ಮತ್ತು URP ಅನ್ನು (ಏಕರೂಪ ಉಲ್ಲೇಖ/ ಮರುಪಡೆಯುವಿಕೆ ಅವಧಿಯ) MRP ಗೆ (ಮಿಶ್ರ ಉಲ್ಲೇಖ/ ಮರುಪಡೆಯುವಿಕೆ ಅವಧಿಯ) ಬದಲಾಯಿಸಿತು. URP ಯು 30 ದಿನಗಳ ಉಲ್ಲೇಖ/ ಮರುಪಡೆಯುವಿಕೆ ಅವಧಿಯಯನ್ನು ಎಲ್ಲಾ ಬಳಕೆ, ಆಹಾರ ಪದಾರ್ಥಗಳು ಮತ್ತು ಆಹಾರೇತರ ವಸ್ತುಗಳಿಗಾಗಿ ಬಳಸುತ್ತದೆ. ಆದರೆ ತೆಂಡೂಲ್ಕರ್ ಸಮಿತಿಯು ಕಳೆದ ಒಂದು ವರ್ಷದಿಂದ ಐದು ಅಹಾರೇತರ ವಸ್ತುಗಳಿಗೆ ಉಲ್ಲೇಖ ಅವಧಿಯನ್ನು ಬದಲಾಯಿಸಿತು, ಅವುಗಳು ಯಾವುದೆಂದರೆ, ಬಟ್ಟೆ, ಪಾದರಕ್ಷೆ, ಬಾಳಿಕೆ ಬರುವ ವಸ್ತುಗಳು, ಶೈಕ್ಷಣಿಕ ಮತ್ತು ಸಾಂಸ್ಥಿಕ ವೈದ್ಯಕೀಯ ವೆಚ್ಚಗಳು. ಈ ವೆಚ್ಚಗಳನ್ನು 'ಮಿಶ್ರ ಉಲ್ಲೇಖ/ ಗರಿಷ್ಟ ಚಿಲ್ಲರೆ ಬೆಲೆ ಎಂ ಆರ್ ಪಿ -MRP) ಎಂದು ಕರೆಯಲಾಗುತ್ತದೆ.

| ಕೋಷ್ಟಕ 1.2 | | |
|---|---|---|
| ರಾಷ್ಟ್ರೀಯ ಬಡತನ ರೇಖೆಗಳು (ಪ್ರತಿ ತಿಂಗಳಿಗೆ ತಲಾ ರೂಯಿಗಳಲ್ಲಿ) | | |
| ವರ್ಷ | ಗ್ರಾಮೀಣ | ನಗರ |
| 2004-05 | 446.7 | 578.8 |
| 2009-10 | 672.8 | 859.6 |
| 2011-12 | 816.0 | 1000.0 |

ತೆಂಡೂಲ್ಕರ್ ಸಮಿತಿಯು, 2004-05 ರ ಅಖಿಲ ಭಾರತ ಬಡತನ ರೇಖೆಯ ಲೆಕ್ಕಾಚಾರದಂತೆ, ಗ್ರಾಮೀಣ ಪ್ರದೇಶಗಳಿಗೆ ತಿಂಗಳಿಗೆ ತಲಾ 446.7 ರೂಪಾಯಿ ಮತ್ತು ನಗರ ಪ್ರದೇಶಗಳಿಗೆ ತಿಂಗಳಿಗೆ ತಲಾ 578.8 ರೂಪಾಯಿಗಳೆಂದು ಅಂದಾಜಿಸಿತು. ಇದರ ಆಧಾರದ ಮೇಲೆ, 2004-05 ರಲ್ಲಿ ಗ್ರಾಮೀಣ ಜನಸಂಖ್ಯೆಯ 41.8% ಮತ್ತು ನಗರ ಜನಸಂಖ್ಯೆಯ 25.7% ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದು ಅಂದಾಜಿಸಲಾಗಿತ್ತು. ಇಡೀ ದೇಶಕ್ಕೆ ಒಟ್ಟಾರೆ 2004-05 ರಲ್ಲಿ ಶೇ.37.2 ರಷ್ಟು ಜನರು ಬಡತನ ರೇಖೆಗಿಂತ ಕೆಳಗಿದ್ದರು. 2013 ರಲ್ಲಿ ಇದೇ ವಿಧಾನವನ್ನು ಬಳಸಿಕೊಂಡು, ಬಡತನ ರೇಖೆಯನ್ನು, ಗ್ರಾಮೀಣ ಪ್ರದೇಶಗಳಿಗೆ ದಿನಕ್ಕೆ ತಲಾ 27.20 ರೂ.,

ಮತ್ತು ನಗರ ಪ್ರದೇಶಗಳಿಗೆ 33.33 ರೂಪಾಯಿಗಳೆಂದು ಪರಿಷ್ಕರಿಸಲಾಯಿತು. ಇದರಿಂದ, ಗ್ರಾಮೀಣ ಪ್ರದೇಶದಲ್ಲಿ ತಲಾ ತಿಂಗಳಿಗೆ 816 ರೂ., ಮತ್ತು ನಗರ ಪ್ರದೇಶದಲ್ಲಿ ತಲಾ ತಿಂಗಳಿಗೆ 1000 ರೂ. ಎಂದು ಅನುವಾದಿಸುತ್ತದೆ. ಇದರ ಆಧಾರದ ಮೇಲೆ, 2011-12 ರಲ್ಲಿ 21.9% ಜನರು ಬಡತನ ರೇಖೆಗಿಂತ ಕೆಳಗಿದ್ದರು (ನಗರ ಪ್ರದೇಶಗಳಲ್ಲಿ 21.7%).

ಸಿ. ರಂಗರಾಜನ್ ಅಧ್ಯಕ್ಷತೆಯಲ್ಲಿ (2012 ರಲ್ಲಿ ಸ್ಥಾಪನೆ) ಹೊಸ ತಜ್ಞರ ತಂಡ ತನ್ನ ವರದಿಯನ್ನು 2014 ರಲ್ಲಿ ಸಲ್ಲಿಸಿ, ಬಡತನ ರೇಖೆಯ ಹೊಸ ಅಂದಾಜಿನೊಂದಿಗೆ ಬಂದಿತು. ಇದು, 'ತಲಾ ಮಾಸಿಕ ಖರ್ಚು' ಎಂದು ಗ್ರಾಮೀಣ ಪ್ರದೇಶಗಳಲ್ಲಿ ರೂ. 972 ಮತ್ತು ನಗರ ಪ್ರದೇಶಗಳಲ್ಲಿ ರೂ 1407 ಎಂದು ಬಡತನ ರೇಖೆಯ ಆಧಾರವಾಗಿ ವ್ಯಾಖ್ಯಾನಿಸಲಾಗಿದೆ. ಇದು ಬಡತನ ರೇಖೆಯನ್ನು ವ್ಯಾಖ್ಯಾನಿಸಲು 'ಐದು ಕುಟುಂಬಗಳ ಮಾಸಿಕ ವೆಚ್ಚ' ಅನ್ನು ಬಳಸಿತು, ಅದರಂತೆ, ಇದು ಗ್ರಾಮೀಣ ಪ್ರದೇಶಗಳಲ್ಲಿ 4860 ರೂಪಾಯಿಗಳು ಮತ್ತು ನಗರ ಪ್ರದೇಶಗಳಲ್ಲಿ 7035 ರೂಪಾಯಿಗಳನ್ನುಷ್ಟಿದೆ. ವ್ಯಕ್ತಿಗಳ ಖರ್ಚು ವೆಚ್ಚಗಳಿಗಿಂತ, ಕುಟುಂಬಗಳ ವೆಚ್ಚವು ಹೆಚ್ಚು ಸೂಕ್ತವಾಗಿದೆ ಎಂದು ತಜ್ಞರ ಗುಂಪು ಅಭಿಪ್ರಾಯ ಪಟ್ಟಿದೆ. ರಂಗರಾಜನ್ ಸಮಿತಿಯು ಐಸಿಎಂಆರ್ (ICMR) ಮಾನದಂಡಗಳ ಆಧಾರದ ಮೇಲೆ ಉಷ್ಣಪರಿಮಾಣಗಳು, ಪ್ರೋಟೀನ್ಗಳು ಮತ್ತು ಕೊಬ್ಬುಗಳ ಸರಾಸರಿ ಅಗತ್ಯಗಳನ್ನು ಪರಿಗಣಿಸಿದೆ**,** ಅವುಗಳನ್ನು ಈ ಕೆಳಗೆ ನೀಡಲಾಗಿದೆ**:**

- **ಉಷ್ಣಪರಿಮಾಣ (ಕ್ಯಾಲೊರಿ-calorie) ಅಗತ್ಯ:** ನಗರ ಪ್ರದೇಶಗಳಲ್ಲಿ 2090 ಕೆ ಸಿ ಯ ಲ್ (kcal) ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 2155 ಕೆ ಸಿ ಯ ಲ್ (kcal).
- **ಪ್ರೋಟೀನ್ಗಳು:** ನಗರ ಪ್ರದೇಶಗಳಿಗೆ 50 ಗ್ರಾಂ ಮತ್ತು ಗ್ರಾಮೀಣ ಪ್ರದೇಶಗಳಿಗೆ 48 ಗ್ರಾಂ.
- **ಕೊಬ್ಬು:** ನಗರ ಪ್ರದೇಶಗಳಿಗೆ 28 ಗ್ರಾಂ ಮತ್ತು ಗ್ರಾಮೀಣ ಪ್ರದೇಶಗಳಿಗೆ 26 ಗ್ರಾಂ.

ಇತ್ತೀಚಿನ ಬಡತನ ಅಂದಾಜು, 2011 ರಲ್ಲಿ ನಡೆಸಲಾದ ಸಾಮಾಜಿಕ ಆರ್ಥಿಕ ಜಾತಿ ಜನಗಣತಿಯ ಮೇಲೆ (SECC) ಆಧರಿಸಿದೆ. 2015 ರಿಂದ ಬಡ ಕುಟುಂಬಗಳನ್ನು ಗುರುತಿಸಲು ಈ ದತ್ತಾಂಶವನ್ನು ಬಳಸಲಾಗುತ್ತಿದೆ. ಈ ವಿಧಾನವು, ಆಸ್ತಿಗಳು, ಆದಾಯ, ಸಾಕ್ಷರತೆ, ಆಧುನಿಕ ಸೌಕರ್ಯಗಳಾದ ಮೊಬೈಲ್ ಫೋನ್, ವಾಹನ, ಫ್ರಿಡ್ಜ್ ಇತ್ಯಾದಿಗಳ ಬಗ್ಗೆ ಸಂಬಂಧಿಸಿದ ಏಳು ಸೂಚಕಗಳನ್ನು, ಬಳಸಿ, ಬಡವರು ಮತ್ತು ಬಡವರಲ್ಲದ ನಡುವೆ ವ್ಯತ್ಯಾಸವನ್ನು ಪಡೆಯಲಾಗುತ್ತದೆ. ಈ ವಿಧಾನದ ಆಧಾರದ ಮೇಲೆ, 31.26% ಜನರು ಬಡವರೆಂದು ಪರಿಗಣಿಸಲ್ಪಟ್ಟಿದ್ದಾರೆ.

### 3. ಬಡತನದ ಕಾರಣಗಳು

- **ಸಾಂಸ್ಥಿಕ ಮತ್ತು ಸಾಮಾಜಿಕ ಅಂಶಗಳು:**

ಬಡವರ ಬದುಕನ್ನು ಗುರುತಿಸುವ ಸಾಂಸ್ಥಿಕ ಮತ್ತು ಸಾಮಾಜಿಕ ಅಂಶಗಳಲ್ಲಿ ಬಡತನಕ್ಕೆ ಕಾರಣಗಳು ಅಡಗಿವೆ**.** ಬಡವರು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗಿ ಉತ್ತಮ ಆದಾಯ ತರುವ ಕೌಶಲಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ**.** ಬಡ ಜನರಿಗೆ ಉತ್ತಮ ಆರೋಗ್ಯ ಸೌಲಭ್ಯವೂ ಇಲ್ಲ**.**

- **ಬಡವರಲ್ಲಿ ತ್ವರಿತ ಜನಸಂಖ್ಯಾ ಬೆಳವಣಿಗೆ:**

**1941-51** ರಲ್ಲಿ ಜನಸಂಖ್ಯೆಯ ಬೆಳವಣಿಗೆ ದರವು **1%**ರಿಂದ **1991** ರಲ್ಲಿ **2.1%** ಕ್ಕೆ ಏರಿಕೆಯಾಯಿತು. ಅನಕ್ಷರತೆ, ಸಾಂಪ್ರದಾಯಿಕ ಮನೋಭಾವ, ಕುಟುಂಬ ಯೋಜನಾ ಪದ್ಧತಿಗಳ ಕೊರತೆ, ಗಂಡು ಮಗುವಿಗೆ ಆದ್ಯತೆ ಇತ್ಯಾದಿಗಳಿಂದಾಗಿ ಬಡ ಜನರಲ್ಲಿ ಜನಸಂಖ್ಯಾ ಬೆಳವಣಿಗೆ ಹೆಚ್ಚಾಗಿದೆ. ದೊಡ್ಡ ಗಾತ್ರದ ಕುಟುಂಬಗಳು ಮತ್ತು ಕಡಿಮೆ ಆದಾಯ ಹೊಂದಿರುವ ಅವರು ಕುಟುಂಬ ಸದಸ್ಯರ ಮೂಲಭೂತ ಕನಿಷ್ಠ ಅಗತ್ಯಗಳನ್ನು ಸಹ ಪೂರೈಸಲು ಅಸಮರ್ಥರಾಗಿದ್ದಾರೆ.

- **ಭೂ ಸುಧಾರಣೆಗಳ ಕಳಪೆ ಅನುಷ್ಠಾನ:**

ಸ್ವಾತಂತ್ರ್ಯದ ನಂತರ ಸರ್ಕಾರ ಭೂ ಸುಧಾರಣೆಗಳನ್ನು ಜಾರಿಗೆ ತರಲು ಮತ್ತು ಭೂಮಿ ಇಲ್ಲದವರಿಗೆ ಭೂಮಿಯನ್ನು ಮರುಹಂಚಿಕೆ ಮಾಡಲು ಪ್ರಯತ್ನಿಸಿತು. ಈ ಕ್ರಮವು ಸೀಮಿತ ಮಟ್ಟಕ್ಕೆ ಮಾತ್ರ ಯಶಸ್ವಿಯಾಗಿದೆ. ದೊಡ್ಡ ಪ್ರಮಾಣದ ಕೃಷಿ ಕಾರ್ಮಿಕರಿಗೆ ಸಣ್ಣ ಹಿಡುವಳಿಗಳನ್ನು ಕೃಷಿ ಮಾಡಲು ಸಾಧ್ಯವಾಗಲಿಲ್ಲ, ಏಕೆಂದರೆ ಅವರಿಗೆ ಭೂಮಿಯನ್ನು ಉತ್ಪಾಕವಾಗಿಸಲು ಹಣ ಅಥವಾ ಕೌಶಲ್ಯಗಳು ಇರಲಿಲ್ಲ ಮತ್ತು ಭೂ ಹಿಡುವಳಿಗಳು ತುಂಬಾ ಚಿಕ್ಕದಾಗಿದ್ದವು.

- **ಉದ್ಯೋಗದ ಪರ್ಯಾಯ ಮೂಲಕೊರತೆ:**

ಗ್ರಾಮೀಣ ಬಡವರಲ್ಲಿ ಹೆಚ್ಚಿನ ಭಾಗ ಸಣ್ಣ ರೈತರಾಗಿದ್ದಾರೆ. ಅವರು ಹೊಂದಿರುವ ಭೂಮಿ ಕಡಿಮೆ ಫಲವತ್ತಾಗಿದೆ ಮತ್ತು ಮಳೆಗಾಲವನ್ನು ಅವಲಂಬಿಸಿದೆ. ಅವರುಗಳ ಉಳಿವು ಜೀವನಾಧಾರ ಬೆಳೆಗಳ ಮೇಲೆ ಮತ್ತು ಕೆಲವೊಮ್ಮೆ ಜಾನುವಾರುಗಳ ಮೇಲೆ ಅವಲಂಭಿತವಾಗಿರುತ್ತದೆ. ಜನಸಂಖ್ಯೆ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವುದರಿಂದ ಮತ್ತು ಪರ್ಯಾಯ ಉದ್ಯೋಗ ಮೂಲಗಳಿಲ್ಲದೆ, ವ್ಯವಸಾಯಕ್ಕಾಗಿ ತಲಾ ಭೂಮಿಯ ಲಭ್ಯತೆಯು ಕ್ರಮೇಣವಾಗಿ ಇಳಿಮುಖವಾಗಿ ಭೂ ಹಿಡುವಳಿಗಳ ವಿಘಟನೆಗೆ ಕಾರಣವಾಗಿದೆ.

- **ಸಾಲಬಾಧೆ:**

ಮೇಲಿಂದ ಮೇಲೆ ಬರುವ ಬರುವ ವರದಿಗಳ ಪ್ರಕಾರ, ಕೃಷಿ ಮತ್ತು ಇತರ ವೈಯುಕ್ತಿಕ ಅಗತ್ಯಗಳಿಗಾಗಿ ತೆಗೆದುಕೊಂಡ ಸಾಲವನ್ನು ಮರುಪಾವತಿಸಲು ಸಾಧ್ಯವಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅನೇಕ ಬಾರಿ, ಬರಗಾಲ ಅಥವಾ ಇತರ ನೈಸರ್ಗಿಕ ವಿಕೋಪಗಳಿಂದಾಗಿ ಅವರ ಬೆಳೆಗಳು ವಿಫಲವಾಗುತ್ತವೆ, ತೀವ್ರವಾದ ಒತ್ತಡವನ್ನು ಉಂಟು ಮಾಡುತ್ತದೆ ಮತ್ತು ತೀವ್ರ ಹಂತಗಳಿಗೆ ಅವರನ್ನು ಕರೆದೊಯ್ಯಲು ಕಾರಣವಾಗುತ್ತವೆ.

- **ಮೂಲಭೂತ ಸೌಕರ್ಯಗಳ ಕೊರತೆ:**

ಆರ್ಥಿಕ ಮತ್ತು ಸಾಮಾಜಿಕ ಮೂಲಭೂತ ಸೌಕರ್ಯಗಳಾದ ಇಂಧನ, ಸಾರಿಗೆ, ವಿದ್ಯುತ್, ಶಿಕ್ಷಣ, ಆರೋಗ್ಯ ಇತ್ಯಾದಿಗಳು ಅಭಿವೃದ್ಧಿ ಮತ್ತು ಅಭಿವೃದ್ಧಿಯ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತವೆ. ಈ ಮೂಲಸೌಕರ್ಯಗಳ ಕೊರತೆಯು, ಅರ್ಥವ್ಯವಸ್ಥೆಯ ಬೆಳವಣಿಗೆ ಮತ್ತು ಬಡತನವನ್ನು ನಿವಾರಿಸುವ ಪ್ರಯತ್ನಗಳನ್ನು ನಿಧಾನಗೊಳಿಸುತ್ತದೆ.

- **ಸಾಮಾಜಿಕ ಅಂಶಗಳು:**

ವಿವಿಧ ಸಾಮಾಜಿಕ ಅಂಶಗಳಾದ, ಜಾತಿ ವ್ಯವಸ್ಥೆ, ಅವಿಭಕ್ತ ಕುಟುಂಬ ವ್ಯವಸ್ಥೆ, ಧಾರ್ಮಿಕ ನಂಬಿಕೆ ಮತ್ತು ನಂಬಿಕೆಗಳು, ಆನುವಂಶಿಕತೆಯ ನಿಯಮ ಮುಂತಾದವು ಆರ್ಥಿಕ ಬೆಳವಣಿಗೆಯ ಪ್ರಕ್ರಿಯೆಗೆ ಅನೇಕ ವೇಳೆ ಅಡ್ಡಿಯುಂಟು ಮಾಡುತ್ತದೆ. ಉದಾಹರಣೆಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರು, ಅಗತ್ಯ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರದ ಕಾರಣ, ನಗರ ಮತ್ತು ಗ್ರಾಮೀಣ ಆರ್ಥಿಕತೆಯ ವಿವಿಧ ವಲಯಗಳಲ್ಲಿ ಉದಯೋನ್ಮುಖ ಉದ್ಯೋಗಾವಕಾಶಗಳಲ್ಲಿ ಭಾಗವಹಿಸಲು ಅಸಮರ್ಥರಾಗಿದ್ದಾರೆ.

## 4. ಬಡತನ ನಿರ್ಮೂಲನೆಗೆ ನೀತಿಗಳು ಮತ್ತು ಕಾರ್ಯಕ್ರಮಗಳು

ಬಡತನ ನಿವಾರಣೆಗೆ ಸರ್ಕಾರದ ವಿಧಾನವು ಮೂರು ರೂಪಗಳನ್ನು ಪಡೆದುಕೊಂಡಿದೆ. ಮೊದಲನೆಯದು ಬೆಳವಣಿಗೆ ಆಧಾರಿತ ವಿಧಾನ. ಆರ್ಥಿಕ ಬೆಳವಣಿಗೆಯ ಪರಿಣಾಮಗಳು - ಒಟ್ಟು ದೇಶೀಯ ಉತ್ಪನ್ನದಲ್ಲಿ ತ್ವರಿತ ಏರಿಕೆ ಮತ್ತು ತಲಾ ಆದಾಯವು ಸಮಾಜದ ಎಲ್ಲಾ ವರ್ಗಗಳಿಗೂ ಹರಡುತ್ತದೆ ಮತ್ತು ಸರಿಯಾದ ಸಮಯದಲ್ಲಿ ಬಡ ವರ್ಗಗಳಿಗೂ ತೊಟ್ಟಿಕ್ಕುತ್ತದೆ ಎಂಬ ನಿರೀಕ್ಷೆಯನ್ನು ಇದು ಆಧರಿಸಿದೆ. **1950** ಮತ್ತು **1960** ರ ದಶಕದ ಆರಂಭದಲ್ಲಿ ಇದು ಯೋಜನೆಯ ಪ್ರಮುಖ ಕೇಂದ್ರವಾಗಿತ್ತು. ಆದಾಗ್ಯೂ, ಜನಸಂಖ್ಯೆಯ ಬೆಳವಣಿಗೆಯು, ತಲಾ ಆದಾಯದಲ್ಲಿ ಬಹಳ ಕಡಿಮೆ ಬೆಳವಣಿಗೆಗೆ ಕಾರಣವಾಗಿದೆ. ಬಡವರು ಮತ್ತು ಶ್ರೀಮಂತರ ನಡುವಿನ ಅಂತರವು ವಾಸ್ತವವಾಗಿ ವಿಸ್ತರಿಸಿದೆ. ಹಸಿರು ಕ್ರಾಂತಿಯು ಪ್ರಾದೇಶಿಕವಾಗಿ ಮತ್ತು ದೊಡ್ಡ ಮತ್ತು ಸಣ್ಣ ರೈತರ ನಡುವಿನ ಅಸಮಾನತೆಯನ್ನು ಉಲ್ಬಣಗೊಳಿಸಿತು. ಭೂಮಿಯನ್ನು ಪುನರ್ವಿತರಣೆ ಮಾಡಲು ಅಸಮ್ಮತಿ ಮತ್ತು ಅಸಮರ್ಥತೆ ಇತ್ತು. ಆರ್ಥಿಕ ಬೆಳವಣಿಗೆಯ ಲಾಭಗಳು ಬಡವರಿಗೆ ತೊಟ್ಟಿಕ್ಕಿಲ್ಲ ಎಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ.

ಬಡವರನ್ನು ನಿರ್ದಿಷ್ಟವಾಗಿ ಪರಿಹರಿಸಲು ಪರ್ಯಾಯ ಮಾರ್ಗಗಳನ್ನು ಹುಡುಕುತ್ತಿರುವಾಗ, ಹೆಚ್ಚುವರಿ ಸ್ವತ್ತುಗಳ ರಚನೆಯ ಮೂಲಕ ಮತ್ತು ಕೆಲಸದ ಉತ್ಪಾದನೆಯ ಮೂಲಕ ಬಡವರಿಗೆ ಆದಾಯ ಮತ್ತು ಉದ್ಯೋಗವನ್ನು ಹೆಚ್ಚಿಸಬಹುದು ಎಂದು ನೀತಿ ನಿರೂಪಕರು ಅಭಿಪ್ರಾಯಪಟ್ಟರು. ನಿರ್ದಿಷ್ಟ ಬಡತನ ನಿವಾರಣಾ ಕಾರ್ಯಕ್ರಮಗಳ ಮೂಲಕ ಇದನ್ನು ಸಾಧಿಸಬಹುದು. ಈ ಎರಡನೆಯ ವಿಧಾನವನ್ನು ಮೂರನೇ ಪಂಚವಾರ್ಷಿಕ ಯೋಜನೆಯಿಂದ

(1961-66) ಪ್ರಾರಂಭಿಸಲಾಯಿತು ಮತ್ತು ಅಂದಿನಿಂದ ಹಂತಹಂತವಾಗಿ ವಿಸ್ತರಿಸಲಾಯಿತು. 1970 ರ ದಶಕದಲ್ಲಿ ಪ್ರಾರಂಭಿಸಲಾದ ಗಮನಾರ್ಹ ಕಾರ್ಯಕ್ರಮಗಳಲ್ಲಿ ಒಂದು ಆಹಾರಕ್ಕಾಗಿ ಕೆಲಸ. (***Food for Work)***

ಸ್ವ-ಉದ್ಯೋಗ ಕಾರ್ಯಕ್ರಮಗಳನ್ನು ಮತ್ತು ವೇತನ ಉದ್ಯೋಗ ಕಾರ್ಯಕ್ರಮಗಳನ್ನು ವಿಸ್ತರಿಸುವುದು ಬಡತನವನ್ನು ನಿವಾರಿಸುವ ಕೆಲವು ಪ್ರಮುಖ ವಿಧಾನಗಳೆಂದು ಪರಿಗಣಿಸಲಾಗಿದೆ. ಇಂತಹ ಸ್ವ-ಉದ್ಯೋಗ ಕಾರ್ಯಕ್ರಮಗಳ ಉದಾಹರಣೆಗಳೆಂದರೆ ಗ್ರಾಮೀಣ ಉದ್ಯೋಗ ಉತ್ಪಾದನಾ ಕಾರ್ಯಕ್ರಮ *(ಆರ್‌ಇಜಿಪಿ)* (***Rural Employment Generation Programme (REGP)***, ಪ್ರಧಾನ ಮಂತ್ರಿ ರೋಜ್ಗರ್ ಯೋಜನೆ *(ಪಿಎಂಆರ್‌ವೈ)* (***Prime Minister's Rozgar Yojana (PMRY)*** ಮತ್ತು ಸ್ವರ್ಣ ಜಯಂತಿ ಶಹರಿ ರೋಜ್ಗರ್ ಯೋಜನೆ *(ಎಸ್‌ಜೆಎಸ್‌ಆರ್‌ವೈ)* (***Swarna Jayanti Shahari Rozgar Yojana (SJSRY)***. ಮೊದಲ ಕಾರ್ಯಕ್ರಮವು ಬ್ಯಾಂಕ್ ಸಾಲಗಳ ರೂಪದಲ್ಲಿ ಹಣಕಾಸಿನ ನೆರವಿನ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಸ್ವ-ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಕಡಿಮೆ ಆದಾಯದ ಕುಟುಂಬಗಳಿಂದ ವಿದ್ಯಾವಂತ ನಿರುದ್ಯೋಗಿಗಳು ಪಿಎಂಆರ್‌ವೈ ***(PMRY)*** ಅಡಿಯಲ್ಲಿ ಉದ್ಯೋಗವನ್ನು ಉತ್ಪಾದಿಸುವ ಯಾವುದೇ ರೀತಿಯ ಉದ್ಯಮವನ್ನು ಸ್ಥಾಪಿಸಲು ಆರ್ಥಿಕ ಸಹಾಯವನ್ನು ಪಡೆಯಬಹುದು. ಎಸ್‌ಜೆಎಸ್‌ಆರ್‌ವೈ ***(SJSRY)*** ಮುಖ್ಯವಾಗಿ ನಗರ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ.

1990 ರ ದಶಕದಿಂದ, ಈ ವಿಧಾನವನ್ನು ಬದಲಾಯಿಸಲಾಗಿದೆ. ಸ್ವಯಂ ಉದ್ಯೋಗ ಚಟುವಟಿಕೆಗಳಿಗೆ ನೋಡಲ್ ಏಜೆನ್ಸಿಗಳಾಗಿರುವ ಸ್ವಸಹಾಯ ಸಂಘಗಳಿಗೆ ಸರ್ಕಾರ ಭಾಗಶಃ ಹಣಕಾಸಿನ ನೆರವು ನೀಡುತ್ತದೆ. ಸ್ವರ್ಣಜಯಂತಿ ಗ್ರಾಮ ಸ್ವರೋಜ್ಗರ್ ಯೋಜನೆ *(ಎಸ್‌ಜಿಎಸ್‌ವೈ)* (***Swarnajayanti Gram Swarozgar Yojana (SGSY)*** ಅಂತಹ ಒಂದು ಕಾರ್ಯಕ್ರಮ. ಇದನ್ನು ಈಗ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ *(ಎನ್‌ಆರ್‌ಎಲ್‌ಎಂ)* (***National Rural Livelihoods Mission (NRLM)*** ಎಂದು ಪುನರ್ರಚಿಸಲಾಗಿದೆ. ಅದೇ ತರಹ ಸಮಾನ ರೂಪದ ಕಾರ್ಯಕ್ರಮವಾದ ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ (***National Urban Livelihoods Mission)*** ಎಂಬ ಕಾರ್ಯಕ್ರಮವನ್ನು ಸಹ ಜಾರಿಗೆ ತರಲಾಗಿದೆ.

ಆಗಸ್ಟ್ 2005 ರಲ್ಲಿ, ಉದ್ಯೋಗ ಒದಗಿಸಲು ಹಕ್ಕು ಆಧಾರಿತ ವಿಧಾನವನ್ನು ಪ್ರಾರಂಭಿಸಲಾಯಿತು. ಪ್ರತಿ ಗ್ರಾಮೀಣ ಕುಟುಂಬಗಳಿಗೆ ವಯಸ್ಕ ಸ್ವಯಂಸೇವಕರು ಕೌಶಲ್ಯರಹಿತ ಹಸ್ತಚಾಲಿತ ಕೆಲಸ ಮಾಡಲು, ವರ್ಷದಲ್ಲಿ ಕನಿಷ್ಠ 100 ದಿನಗಳವರೆಗೆ ಖಾತರಿಪಡಿಸುವ ವೇತನ ಉದ್ಯೋಗವನ್ನು ಒದಗಿಸಲು ಸಂಸತ್ತು ಹೊಸ ಕಾಯ್ದೆಯನ್ನು ಜಾರಿಗೆ ತಂದಿತು,. ಈ ಕಾಯ್ದೆಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ(***Mahatma Gandhi National Rural Employment Guarantee Act)*** ಎಂದು ಕರೆಯಲಾಗುತ್ತದೆ. ಈ ಕಾಯ್ದೆಯಡಿ, ಈ ಕಾರ್ಯಕ್ರಮವನ್ನು ಜಾರಿಗೆ ತಂದ ಪ್ರದೇಶಗಳಲ್ಲಿ, ಕನಿಷ್ಠ ವೇತನದಲ್ಲಿ ಕೆಲಸ ಮಾಡಲು ಸಿದ್ಧರಾಗಿರುವ ಬಡವರಲ್ಲಿ ಎಲ್ಲರೂ ಕೆಲಸ ಮಾಡಲು

ವರದಿ ಮಾಡಬಹುದು. 2013-14 ರಲ್ಲಿ ಸುಮಾರು ಐದು ಕೋಟಿ ಕುಟುಂಬಗಳಿಗೆ ಈ ಕಾನೂನಿನಡಿಯಲ್ಲಿ ಉದ್ಯೋಗಾವಕಾಶಗಳು ದೊರೆತಿವೆ.

ಬಡತನವನ್ನು ಪರಿಹರಿಸುವ ಮೂರನೇ ವಿಧಾನವೆಂದರೆ ಜನರಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು. ಸಾಮಾಜಿಕ ಬಳಕೆಯ ಅಗತ್ಯಗಳಿಗಾಗಿ ಸಾರ್ವಜನಿಕ ಖರ್ಚಿನ ಮೂಲಕ, ಆಹಾರ ಧಾನ್ಯಗಳನ್ನು ಸಹಾಯಧನ ದರದಲ್ಲಿ, ಶಿಕ್ಷಣ, ಆರೋಗ್ಯ, ನೀರು ಸರಬರಾಜು ಮತ್ತು ನೈರ್ಮಲ್ಯ, ಇವುಗಳನ್ನು ಒದಗಿಸುವುದರ ಮೂಲಕ ಬಡತನವನ್ನು ನಿವಾರಿಸಬಹುದು ಎಂದು ವಿಶ್ವದ ಪ್ರವರ್ತಕರಲ್ಲಿ ಸೇರಿದ ಭಾರತವು ಊಹಿಸಿತ್ತು. ಐದನೇ ಪಂಚವಾರ್ಷಿಕ ಯೋಜನೆಯು ಹೀಗೆ ಹೇಳುತ್ತದೆ, "ವಿಸ್ತೃತ ಉದ್ಯೋಗಾವಕಾಶಗಳಿದ್ದರೂ ಸಹ, ಬಡವರಿಗೆ ಎಲ್ಲಾ ಅಗತ್ಯ ಸರಕು ಮತ್ತು ಸೇವೆಗಳನ್ನು ಖರೀದಿಸಲು ಸಾಧ್ಯವಾಗುವುದಿಲ್ಲ. ಸಾಮಾಜಿಕ ಬಳಕೆ ಮತ್ತು ಅಗತ್ಯ ಆಹಾರ ಧಾನ್ಯಗಳು, ಶಿಕ್ಷಣ, ಆರೋಗ್ಯ, ಪೋಷಣೆ, ಕುಡಿಯುವ ನೀರು, ವಸತಿ, ಸಂವಹನ ಮತ್ತು ವಿದ್ಯುತ್ ರೂಪದಲ್ಲಿ ಹೂಡಿಕೆಯಿಂದ ಅವು ಕನಿಷ್ಟ ಕೆಲವು ಮಾನದಂಡಗಳಿಗೆ ಪೂರಕವಾಗಿರಬೇಕು." ಬಡವರ ಆಹಾರ ಮತ್ತು ಪೌಷ್ಠಿಕಾಂಶದ ಸ್ಥಿತಿಯನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಮೂರು ಪ್ರಮುಖ ಕಾರ್ಯಕ್ರಮಗಳು ಯಾವುದೆಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆ (***Public Distribution System***), ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ (***Integrated Child Development Scheme***) ಮತ್ತು ಮಧ್ಯಾಹ್ನ ಊಟದ ಯೋಜನೆ (***Midday Meal Scheme***). ಹಾಗೆಯೇ, ಪ್ರಧಾನ್ ಮಂತ್ರಿ ಗ್ರಾಮ ಸದಕ್ ಯೋಜನೆ (***Pradhan Mantri Gram Sadak Yojana***), ಪ್ರಧಾನ್ ಮಂತ್ರಿ ಗ್ರಾಮೋದಯ ಯೋಜನೆ (***Pradhan Mantri Gramodaya Yojana***), ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆ (***Valmiki Ambedkar AwasYojana***) ಇತ್ಯಾದಿಗಳು, ಮೂಲಸೌಕರ್ಯ ಮತ್ತು ವಸತಿ ಪರಿಸ್ಥಿತಿಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನಗಳಾಗಿವೆ.

ಕೆಲವು ನಿರ್ದಿಷ್ಟ ಗುಂಪುಗಳಿಗೆ ಸಹಾಯ ಮಾಡಲು ಸರ್ಕಾರವು ಹಲವಾರು ಬಗೆಯ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಸಹ ಹೊಂದಿದೆ. *2014* ರಿಂದ ಪ್ರಧಾನ್ ಮಂತ್ರಿ ಜನ-ಧನ್ ಯೋಜನೆ ಎಂಬ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಇದರಲ್ಲಿ ಜನರು ಬ್ಯಾಂಕ್ ಖಾತೆಗಳನ್ನು ತೆರೆಯಲು ಪ್ರೋತ್ಸಾಹಿಸಲಾಗುತ್ತದೆ. ಠೇವಣಿ ಇಲ್ಲದಿದ್ದರೂ ಸಹ ಪ್ರತಿ ಬ್ಯಾಂಕ್ ಅಂತಹ ಬ್ಯಾಂಕ್ ಖಾತೆಯನ್ನು ತೆರೆಯಲು ನಿರ್ಬಂಧವನ್ನು ಹೊಂದಿರುತ್ತದೆ. ಖಾತೆದಾರರಿಗೆ ರೂ. 1 ಲಕ್ಷ ಅಪಘಾತ ವಿಮೆ ಮತ್ತು ರೂ. 30,000 ಜೀವ ವಿಮಾ ರಕ್ಷಣೆಗೂ ಅರ್ಹತೆ ಹೊಂದಿದ್ದಾರೆ.

## ತೀರ್ಮಾನ

ಬಡತನ ನಿವಾರಣೆಯ ನೀತಿ ಕಳೆದ ಏಳು ದಶಕಗಳಲ್ಲಿ ವಿಕಸನಗೊಂಡಿದೆ. ಬಡತನ ನಿರ್ಮೂಲನೆ ಕಾರ್ಯಕ್ರಮಗಳಿಂದ ಬಡವರಿಗೆ ಸಾಕಷ್ಟು ಪ್ರಯೋಜನವಾಗಿದೆ. ಇದರ ಪರಿಣಾಮವಾಗಿ, ಬಡತನಮಟ್ಟವು ಕ್ರಮೇಣ ಕಡಿಮೆಯಾಗಿದೆ. ಜನಸಂಖ್ಯೆಯ ಸುಮಾರು 55 ಪ್ರತಿಶತದಷ್ಟು ಬಡತನದ ಪ್ರಮಾಣವು (ಲಕ್ಡವಾಲಾ ಸಮಿತಿ ಪ್ರಕಾರ) 2011 ರಲ್ 31 ಪ್ರತಿಶತಕ್ಕೆ

ಇಳಿದಿದೆ (SECC ದತ್ತಾಂಶದ ಪ್ರಕಾರ). ಆದರೆ, ಆಸ್ತಿಗಳ ಮಾಲೀಕತ್ವ ಮತ್ತು ಉತ್ಪಾದನೆಯ ಪ್ರಕ್ರಿಯೆಯಲ್ಲಿ ಯಾವುದೇ ಆಮೂಲಾಗ್ರ ಬದಲಾವಣೆಗಳಾಗಿಲ್ಲ ಮತ್ತು ಅಗತ್ಯವಿರುವವರಿಗೆ ಮೂಲ ಭೂತ ಸೌಕರ್ಯಗಳನ್ನು ಸುಧಾರಣೆಯಿಲ್ಲದ ಕಾರಣ ಪ್ರಗತಿಯು ನಿಧಾನವಾಗಿದೆ ಮತ್ತು ಸಮಸ್ಯೆಯು ನಿರಂತರವಾಗಿ ಮುಂದುವರಿಯುತ್ತಿದೆ. ಸ್ಥಳೀಯ ಮಟ್ಟದ ಸಂಸ್ಥೆಗಳು ಹಾಗೂ ಬಡವರ ಸಹಭಾಗಿತ್ವ ಇಲ್ಲದೆ ಈ ಕಾರ್ಯಕ್ರಮಗಳು ಯಶಸ್ವಿಯಾಗಬಹುದೆಂದು ನಿರೀಕ್ಷಿಸಲಾಗದು. ಬಡವರು, ಸಂಪನ್ಮೂಲಗಳನ್ನು ಪಡೆಯಲು ಮತ್ತು ಸಾಮಾಜಿಕ ಕ್ರೋಢಿಕರಣ ಮೂಲಕ ಮತ್ತು ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಅತ್ಯಗತ್ಯವಾಗಿದೆ.